# ಮೈಸೂರು ವಿಶ್ವವಿದ್ಯಾನಿಲಯ

**ದಿನಾಂಕ 13–08–2018ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ನಾಲ್ಕನೇ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಿದ್ದ ಸದಸ್ಯರು:**

1. ಪ್ರೊ.ಟಿ.ಕೆ.ಉಮೇಶ – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಕು.ಸಹನಾ ಶಿವಪ್ಪ – ಸದಸ್ಯರು
3. ಪ್ರೊ. ಎಸ್.ಎಲ್.ಸುರೇಶ್ – ಸದಸ್ಯರು
4. ಡಾ. ರಾಜಗೋಪಾಲ್ – ಸದಸ್ಯರು
5. ಡಾ. ಎ.ಟಿ.ಶಿವರಾಮು – ಸದಸ್ಯರು
6. ಡಾ. ಎಂ.ಪ್ರೀತಿ – ಸದಸ್ಯರು
7. ಪ್ರೊ. ಜೆ. ಸೋಮಶೇಖರ್ ಕುಲಸಚಿವ(ಪರೀಕ್ಷಾಂಗ) – ಸದಸ್ಯರು
8. ಪ್ರೊ.ಆರ್.ರಾಜಣ್ಣ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಿಂಡಿಕೇಟ್‌ನ ನಾಲ್ಕನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಇಂದಿನ ಸಭೆಯಲ್ಲಿ ಮಂಡಿಸಲಾಗಿರುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲು ತಮ್ಮ ಅಮೂಲ್ಯ ಸಲಹೆ ನೀಡಬೇಕೆಂದು ಕೋರಿದರು.

ನಂತರ ಇತ್ತೀಚೆಗಷ್ಟೆ ದೈವಾಧೀನರಾದ ಹಿರಿಯ ಸಾಹಿತಿ, ಚಿಂತಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿ, ಸಿಂಡಿಕೇಟಿನ ಮಾಜಿ ಸದಸ್ಯರಾದ ಪ್ರೊ. ಶಿವರಾಮು ಕಾಡನಕುಪ್ಪೆ ಅವರ ನಿಧನಕ್ಕೆ ಸಭೆಯು ಸಂತಾಪ ಸೂಚಿಸಿ ಎರಡು ನಿಮಿಷಗಳ ಮೌನಾಚರಣೆಯೊಂದಿಗೆ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| **I** | ದಿನಾಂಕ 21–06–2018ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 21–06–2018ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 2018/5.52ಕ್ಕೆ ಸಂಬಂಧಿಸಿದಂತೆ **"ಮುಂದೂಡಲಾಯಿತು"** ಎಂದು ತಪ್ಪಾಗಿ ನಮೂದಾಗಿರುವುದರ ಬದಲಿಗೆ ಅಂದಿನ ಸಭೆಯಲ್ಲಿ ನಿರ್ಧರಿಸಿದಂತೆ **"ಮೈಸೂರು ವಿಶ್ವವಿದ್ಯಾನಿಲಯದಲ್ಲಿ National Academic Depository (NAD)ಅನ್ನು** |

| | |
|---|---|
| | ಅಳವಡಿಸಿಕೊಳ್ಳುವ ಬಗ್ಗೆ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು" ಎಂಬ ತಿದ್ದುಪಡಿಯೊಂದಿಗೆ ನಡಾವಳಿಯನ್ನು ದೃಢೀಕರಿಸಲಾಯಿತು. |
| **II** | ದಿನಾಂಕ 21–06–2018ರಂದು ನಡೆದ ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| **ತೀರ್ಮಾನ** | ಗಮನಿಸಲಾಯಿತು. |
| **III** | ದಿನಾಂಕ 20–07–2018ರಂದು ನಡೆದ ಸಿಂಡಿಕೇಟಿನ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ** | ದೃಢೀಕರಿಸಲಾಯಿತು. |
| **2018/8.1** | Mysore Institute of Commerce and Arts ಕಾಲೇಜು, ಮೈಸೂರು ಇಲ್ಲಿ ಮೇ/ಜೂನ್ 2018ನೇ ಸಾಲಿನ B.B.M., ಪದವಿಯ ಆರನೇ ಸೆಮಿಸ್ಟರಿನ Law and Practice of Banking ಪತ್ರಿಕೆಗೆ ಪರೀಕ್ಷೆ ಬರೆದಿರುವ ಮೂರು ವಿದ್ಯಾರ್ಥಿಗಳ ಮೌಲ್ಯಮಾಪನಗಳಿಗೆ ಸಂಬಂಧಿಸಿದ ಪರಿಷ್ಕೃತ ಫಲಿತಾಂಶದ ಬಗ್ಗೆ. |
| **ತೀರ್ಮಾನ** | Mysore Institute of Commerce and Arts ಕಾಲೇಜು, ಮೈಸೂರು ಇಲ್ಲಿ ಮೇ/ಜೂನ್ 2018ನೇ ಸಾಲಿನ B.B.M., ಪದವಿಯ ಆರನೇ ಸೆಮಿಸ್ಟರಿನ ಮೂರು ವಿದ್ಯಾರ್ಥಿಗಳ Law and Practice of Banking ಉತ್ತರ ಪತ್ರಿಕೆಗಳನ್ನು ನಿಯಮಾನುಸಾರ ಮರುಮೌಲ್ಯಮಾಪನ ಮಾಡಿದ್ದರೂ ಅನುತ್ತೀರ್ಣರಾಗಿರುವ ಬಗ್ಗೆ ವಿದ್ಯಾರ್ಥಿಗಳು ಸನ್ಮಾನ್ಯ ಕುಲಪತಿಗಳಿಗೆ ದೂರು ಸಲ್ಲಿಸಿದ ಕಾರಣದಿಂದಾಗಿ ಮರುಮೌಲ್ಯಮಾಪನ ಮಾಡಿಸಿ ಫಲಿತಾಂಶ ಪ್ರಕಟಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. ಮತ್ತು ವಿಶೇಷ ಸಂದರ್ಭವೆಂದು ಇದೊಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>ಹಾಗೂ ಸದರಿ ವಿದ್ಯಾರ್ಥಿಗಳ Law and Practice of Banking ಪತ್ರಿಕೆಯನ್ನು ಮೌಲ್ಯಮಾಪನ ಮಾಡಿರುವ ಮೊದಲ ಪರೀಕ್ಷಾ ಮೌಲ್ಯಮಾಪಕರಾದ ಶ್ರೀಮತಿ ಪ್ರತಿಭಾ.ಎಂ., ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಾರತೀನಗರ ಇವರನ್ನು ಎರಡು ಪರೀಕ್ಷಾ ಮೌಲ್ಯಮಾಪನಕಾರ್ಯದಿಂದ ಹೊರಗಿಡಲು ಹಾಗೂ ಎಚ್ಚರಿಕೆ ಮೆಮೋ ನೀಡಲು ಸಿಂಡಿಕೇಟ್ ನಿರ್ಧರಿಸಿತು. |
| **2018/8.2** | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕೆ ವಿಶ್ವವಿದ್ಯಾನಿಲಯದ ತಾಂತ್ರಿಕ ವಿಭಾಗದ ವತಿಯಿಂದ ಸಲ್ಲಿಸಿರುವ ಕಟ್ಟಡ ಕಾಮಗಾರಿಯ ಅಂದಾಜು ವೆಚ್ಚದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಸವ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ರೂ. 2.00 ಕೋಟಿಗಳಿಗೆ ಕ್ರಿಯಾಯೋಜನೆಯನ್ನು ಕಳುಹಿಸಿಕೊಡುವಂತೆ ಸರ್ಕಾರವು ಕೋರಿರುವ ಹಿನ್ನೆಲೆಯಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನೂತನ ಕಟ್ಟಡ ನಿರ್ಮಾಣಕ್ಕೆ ವಿನಿಯೋಗಿಸಲು ಕಟ್ಟಡ ಕಾಮಗಾರಿ ಅಂದಾಜುಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಹಾಗೂ ಅನುದಾನ ಬಿಡುಗಡೆಗೆ ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.3** | Enquiry conducted against 23 delinquent students as per the direction of the Hon'ble High Court – Enquiry Report sent to concerned students for their reply–action to be taken thereof –reg. |
| Decision | The Syndicate carefully considered the enquiry report and the representations submitted by the delinquent students against the enquiry report. The explanations of concerned students do not carry any substantial and new grounds. All their contentions were already considered by the Enquiry Officer. Hence the explanations of students are rejected and the enquiry report is accepted in toto.<br>The Syndicate further resolved to take action to withdraw the degree of 23 delinquent students under Sec. 70 of the Karnataka State Universities Act, 2000. |

| | |
|---|---|
| **2018/8.4** | SIRI CAREE IVE Centreನಲ್ಲಿ Specialized Program ಅಡಿಯಲ್ಲಿ ಹೊಸದಾಗಿ ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | SIRI CAREE IVE Centreನಲ್ಲಿ Specialized Program ಅಡಿಯಲ್ಲಿ M.Sc., (Assisted Reproductive Technology and Embryology) ಕೋರ್ಸ್‌ನ್ನು 40 ವಿದ್ಯಾರ್ಥಿಗಳ ಸಂಖ್ಯಾಮಿತಿಯೊಂದಿಗೆ 2019-20ರ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಷರತ್ತುಬದ್ಧ ಶಿಫಾರಸ್ಸನ್ನು ಮಾಡಿರುವ ಸಮಿತಿಯ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/8.5** | B.Sc., (Honors) in Agricultural Science and Technology/ Horticultural Sciences and Technology ಪದವಿ ಕೋರ್ಸಿಗೆ 2018-19ನೇ ಸಾಲಿಗೆ ನೀಡಲಾದ ಹೆಚ್ಚುವರಿಯಾಗಿ 60 ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ಅನುಸಮರ್ಥನೆ ಕೋರಿ. |
| **ತೀರ್ಮಾನ** | Sampoorna International Institute of Agri. Sciences and Horticultural Techology, Mandya District ಇವರಿಗೆ B.Sc., (Honors) in Agricultural Science and Technology / Horticultural Sciences and Technology ಪದವಿ ಕೋರ್ಸಿಗೆ 2018-19ನೇ ಸಾಲಿಗೆ ಹೆಚ್ಚುವರಿಯಾಗಿ 60 ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಮತಿ ನೀಡಲಾಗಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/8.6** | ಸ್ವರ್ಣಗೌರಿ ಹಬ್ಬಕ್ಕೆ ಸ್ಥಳೀಯ ರಜೆಯೆಂದು ಘೋಷಿಸಬೇಕೆಂದು, ಅಧ್ಯಕ್ಷರು, ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕೇತರರ ಉದ್ಯೋಗಿಗಳ ಸಂಘ, ಮೈಸೂರು ಇವರು ಸಲ್ಲಿಸಿರುವ ಮನವಿ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ಜಾರಿಯಲ್ಲಿದ್ದಂತೆಯೇ ಸ್ವರ್ಣಗೌರಿ ಹಬ್ಬದ ದಿನವನ್ನು ಸ್ಥಳೀಯ ರಜೆಯೆಂದು ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.7** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Asia Pacific Institute of Embryology, Mysuru, ಸಂಸ್ಥೆಯ ವಿಳಾಸವನ್ನು ಬದಲಾವಣೆ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Asia Pacific Institute of Embryology, Mysuru ಇವರಿಗೆ, ಪರಿವೀಕ್ಷಣಾ ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯ ಶಿಫಾರಸ್ಸಿನ ಅನ್ವಯ ಈಗಿರುವ ಸ್ಥಳದಿಂದ # 149, 80ft ರಸ್ತೆ, ನಂದಿ ಸರ್ಕಲ್, ದಟ್ಟಗಳ್ಳಿ 3ನೇ ಹಂತ, ಮೈಸೂರು ಇಲ್ಲಿರುವ ಹೊಸ ಸ್ಥಳಕ್ಕೆ ಸಂಸ್ಥೆಯ ವಿಳಾಸವನ್ನು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/8.8** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ iPixio Education Trust, Bengaluru ಸಂಸ್ಥೆಯ ವಿಳಾಸವನ್ನು ಬದಲಾವಣೆ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ iPixio Education Trust, Bengaluru ಇವರಿಗೆ, ಪರಿವೀಕ್ಷಣಾ ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯ ಶಿಫಾರಸ್ಸಿನ ಅನ್ವಯ ಈಗಿರುವ ಸ್ಥಳದಿಂದ # 52, Rama Towers, Next to Baptist Hospital, Bellary Road, Hebbal, Bangalore ಇಲ್ಲಿರುವ ಹೊಸ ಸ್ಥಳಕ್ಕೆ ಸಂಸ್ಥೆಯ ವಿಳಾಸವನ್ನು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2018/8.9** | ಮೈಸೂರು ವಿಶ್ವವಿದಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Animaster Academy, Bengaluru ಸಂಸ್ಥೆಯ ವಿಳಾಸವನ್ನು ಬದಲಾವಣೆ ಮಾಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದು Specialized Programಗಳನ್ನು ನಡೆಸುತ್ತಿರುವ Animaster Academy, Bengaluru ಇವರಿಗೆ, ಪರಿವೀಕ್ಷಣಾ ಸಮಿತಿಯು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನೀಡಿರುವ ವರದಿಯ ಶಿಫಾರಸ್ಸಿನ ಅನ್ವಯ ಈಗಿರುವ ಸ್ಥಳದಿಂದ # 52, Rama Towers, Next to Baptist Hospital, Bellary Road, Hebbal, Bangalore ಇಲ್ಲಿರುವ ಹೊಸ ಸ್ಥಳಕ್ಕೆ ಸಂಸ್ಥೆಯ ವಿಳಾಸವನ್ನು ಬದಲಾಯಿಸಿಕೊಳ್ಳಲು ಅನುಮತಿ ನೀಡಲಾಗಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/8.10** | Central Food Technological Research Institute, Mysuru ಸಂಸ್ಥೆಗೆ ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ಶಿಫಾರಸ್ಸಿಗೆ ಅನುಮೋದನೆ ಕೋರಿ. |
| **ತೀರ್ಮಾನ** | Central Food Technological Research Institute, Mysuru ಸಂಸ್ಥೆಗೆ ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/8.11** | ಡಾ. ಕೆ. ಭೈರಪ್ಪ, ನಿವೃತ್ತ ಪ್ರಾಧ್ಯಾಪಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಇವರನ್ನು ಯುಪಿಇ ಯೋಜನೆಯಲ್ಲಿ Visiting Scientist ಆಗಿ ನೇಮಕ ಮಾಡಿಕೊಳ್ಳುವ ಬಗ್ಗೆ. |
| **ತೀರ್ಮಾನ** | ಡಾ. ಕೆ. ಭೈರಪ್ಪ, ನಿವೃತ್ತ ಪ್ರಾಧ್ಯಾಪಕರು, ಭೂವಿಜ್ಞಾನ ಅಧ್ಯಯನ ವಿಭಾಗ, ಇವರು ಯುಪಿಇ ಯೋಜನೆಯಲ್ಲಿ Visiting Scientist ಆಗಿ ಕಾರ್ಯನಿರ್ವಹಿಸುತ್ತಿರುವುದರಿಂದ ದಿನಾಂಕ 6–6–2018ರಿಂದ ಜಾರಿಗೆ ಬಂದಂತೆ ಯೋಜನಾವಧಿಯವರೆಗೆ ಅಂದರೆ 31–12–2018ರವರೆಗೆ ಮಾಹೆಯಾನ ರೂ. 25,000/–ಗಳ ಗೌರವಧನದೊಂದಿಗೆ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.12** | 1. ಮಾನಸಗಂಗೋತ್ರಿಯ ಮೌಲ್ಯಭವನದಲ್ಲಿ ಜರುಗುವ ಮೌಲ್ಯಮಾಪನದ ಗೌಪ್ಯತೆ ಮತ್ತು ಇನ್ನಿತರ ಸುರಕ್ಷತಾ ದೃಷ್ಟಿಯಿಂದ Intelligent Video Surveillance System ಅನ್ನು ಖರೀದಿಸಿ ಅಳವಡಿಸುವ ಬಗ್ಗೆ.<br>2. ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್, ಪ್ರೊಜೆಕ್ಟರ್, ಇಂಟರ್‌ನೆಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಬಗ್ಗೆ. |
| **ತೀರ್ಮಾನ** | ಮಾನಸಗಂಗೋತ್ರಿಯ ಮೌಲ್ಯಭವನದಲ್ಲಿ ಜರುಗುವ ಮೌಲ್ಯಮಾಪನದ ಗೌಪ್ಯತೆ ಮತ್ತು ಇನ್ನಿತರ ಸುರಕ್ಷತಾ ದೃಷ್ಟಿಯಿಂದ Intelligent Video Surveillance System ಅನ್ನು ಅಂದಾಜು ವೆಚ್ಚ ರೂ. 34,25,213/–ಗಳ ವೆಚ್ಚದಲ್ಲಿ ನಿಯಮಾನುಸಾರ ಖರೀದಿಸಿ ಅಳವಡಿಸಲು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಕಂಪ್ಯೂಟರ್ ಪ್ರಿಂಟರ್, ಪ್ರೊಜೆಕ್ಟರ್, ಇಂಟರ್‌ನೆಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ರೂ. 87,39,130/–ಗಳ ಅಂದಾಜು ವೆಚ್ಚದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಖರೀದಿಸಲು ಅನುಮತಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/8.13** | ವಿಶ್ವವಿದ್ಯಾನಿಲಯದ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಹಾಗೂ ಕೇಂದ್ರದಲ್ಲಿನ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ. |
| **ತೀರ್ಮಾನ** | ಯುಜಿಸಿ ನವದೆಹಲಿಯು ದಿನಾಂಕ 18–10–2017ರ ಸಾರ್ವಜನಿಕ ಪ್ರಕರಣಟಣೆಯಲ್ಲಿ ಯುಜಿಸಿ 12ನೇ ಯೋಜನಾ ಅವಧಿ ಮುಗಿದ ನಂತರವೂ ಯುಜಿಸಿಯಿಂದ ಅನುಮೋದಿತಗೊಂಡಿರುವ ಯೋಜನೆಗಳನ್ನು ದಿನಾಂಕ 31–03–2019ರವರೆಗೆ ಮುಂದುವರೆಸಲಾಗಿರುವುದನ್ನು ಗಮನಿಸಿದ ಸಭೆಯು ಅದರ ಅನ್ವಯ ವಿಶ್ವವಿದ್ಯಾನಿಲಯದ ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಹಾಗೂ ಕೇಂದ್ರದಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವೆಯನ್ನು ದಿನಾಂಕ 31–03–2019ರವರೆಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| 2018/8.14 | International School of Management Excellence, Bangalore ಸಂಸ್ಥೆಗೆ Business Administration ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ಶಿಫಾರಸ್ಸಿಗೆ ಅನುಮೋದನೆ ಕೋರಿ. |
| ತೀರ್ಮಾನ | International School of Management Excellence, Bangalore ಸಂಸ್ಥೆಗೆ Business Administration ವಿಷಯದಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2018/8.15 | ಸರ್ಕಾರವು ವೈದ್ಯಕೀಯ ಮರುಭರಿಕೆ ಸಂಬಂಧ ಕಾಲ ಕಾಲಕ್ಕೆ ತಿದ್ದುಪಡಿ ಮಾಡುವ ನಿಯಮಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವೈದ್ಯಕೀಯ ಮರು ಭರಿಕೆ ಅಧಿನಿಯಮಕ್ಕೆ ಅಳವಡಿಸಿಕೊಳ್ಳುವ ಬಗ್ಗೆ. |
| ತೀರ್ಮಾನ | ರಾಜ್ಯಸರ್ಕಾರಿ ನೌಕರರ ಅವಲಂಬಿತ ತಂದೆ–ತಾಯಿಯವರಿಗೆ ಸಂಬಂಧಿಸಿದಂತೆ, ದಿನಾಂಕ 01–04–2018 ಮತ್ತು ತದನಂತರ ಪಡೆದ ಚಿಕಿತ್ಸೆಯ ವೈದ್ಯಕೀಯ ವೆಚ್ಚ ಮರುಪಾವತಿಯ ಕುರಿತಂತೆ ಕರ್ನಾಟಕ ಸರ್ಕಾರದ ಸುತ್ತೋಲೆ ಸಿಆಸುಇ 21 ಎಸ್‌ಎಂಆರ್ 2018 ದಿನಾಂಕ 22–06–2018ರಲ್ಲಿ ತಿದ್ದುಪಡಿಮಾಡಿ ಹೊರಡಿಸಿರುವ ಸುತ್ತೋಲೆಯನ್ನು ವಿಶ್ವವಿದ್ಯಾನಿಲಯದಲ್ಲಿ ಈಗಿರುವ ಅಧಿನಿಯಮಗಳೊಂದಿಗೆ ಅಳವಡಿಸಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/8.16 | ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್‌ನಲ್ಲಿ ಹೊಸದಾಗಿ ನೇಮಕಾತಿಗೊಂಡ ಅಧ್ಯಾಪಕರುಗಳಿಗೆ ವೇತನಕ್ಕೆ ಸಂಬಂಧಿಸಿದ ಸವಲತ್ತುಗಳನ್ನು ನೀಡುವ ಬಗ್ಗೆ. |
| ತೀರ್ಮಾನ | ನೇಮಕಾತಿ ಮಂಡಳಿಯ ಮೂಲಕ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ವಿಭಾಗಕ್ಕೆ 2016ರಲ್ಲಿ ಹೊಸದಾಗಿ ನೇಮಕಾತಿಗೊಂಡಿರುವ ಅಧ್ಯಾಪಕರುಗಳಿಗೆ ವೇತನಕ್ಕೆ ಸಂಬಂಧಿಸಿದ ಸವಲತ್ತುಗಳನ್ನು ನಿಯಮಾನುಸಾರ ನೀಡಬೇಕಾಗಿರುತ್ತದೆ. ಆದರೆ ಈ ವಿಭಾಗದಲ್ಲಿ ನಡೆಸುತ್ತಿರುವ ಕೋರ್ಸ್‌ಗಳು ಸ್ವಯಂ ಹಣಕಾಸಿನ ಕೋರ್ಸ್‌ಗಳಾಗಿದ್ದು ಈ ಹಣದಲ್ಲೇ ವೇತನವನ್ನು ನೀಡಬೇಕಾಗಿರುವುದರಿಂದ ವಿಭಾಗದ ಹಣಕಾಸಿನ ನೈಜಸ್ಥಿತಿ ಮತ್ತು ಅದನ್ನು ಬಲಪಡಿಸುವ ಕುರಿತಂತೆ ವರದಿ ಪಡೆದು ನಂತರ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಹಣಕಾಸು ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಸಭೆಯು ಕುಲಪತಿಗಳಿಗೆ ನೀಡಲು ತೀರ್ಮಾನಿಸಿತು. |
| 2018/8.17 | ದಿವಂಗತ ಪ್ರಭಾಕರ್ ಎಸ್., ಸೇವಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಅವರ ಮಗನಾದ ಶ್ರೀ ಪುನೀತ್ ಪಿ., ರವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ದಿವಂಗತ ಪ್ರಭಾಕರ್ ಎಸ್., ಸೇವಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 29–07–2017ರಂದು ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನ ಹೊಂದಿದ್ದು ಇವರ ಮಗನಾದ ಶ್ರೀ ಪುನೀತ್ ಪಿ., ಇವರು ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಉತ್ತೀರ್ಣರಾಗಿರುವುದರಿಂದ ವಿ.ವಿ.ಅಧಿನಿಯಮದ ಪ್ರಕಾರ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ರಚಿಸಿರುವ ಅಧಿನಿಯಮದ ಪ್ರಕರಣ 4(1) ಪ್ರಕಾರ ಪರಿಚಾರಕರ ಹುದ್ದೆಗೆ ಅನುಕಂಪದ ಆಧಾರದ ಮೇಲೆ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/8.18 | ಡಾ. ಎಂ. ಮಹದೇವ ಪ್ರಸಾದ್, ಸಹಾಯಕ ಪ್ರಾಧ್ಯಾಪಕರು, ವಿದ್ಯುನ್ಮಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇವರಿಗೆ Falkirk at United Kingdom ಗೆ ತೆರಳಲು ಅನುಮತಿ ನೀಡಿರುವ ಸಂಬಂಧ ಅನುಸಮರ್ಥಿಸುವ ಬಗ್ಗೆ. |
| ತೀರ್ಮಾನ | ಡಾ. ಎಂ. ಮಹದೇವ ಪ್ರಸಾದ್, ಸಹಾಯಕ ಪ್ರಾಧ್ಯಾಪಕರು, ವಿದ್ಯುನ್ಮಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇವರು ದಿನಾಂಕ 12–06–2018ರಿಂದ 09–07–2018ರವರೆಗೆ ಒಟ್ಟು 28 ದಿನಗಳ ವರೆಗೆ ಶೈಕ್ಷಣಿಕ ಬಿಡುವಿನ ಅವಧಿಯಲ್ಲಿ ವಿಭಾಗದ ಅವರ ದೈನಂದಿನ ಕರ್ತವ್ಯಕ್ಕೆ ತೊಂದರೆಯಾಗದಂತೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ Falkirk at United Kingdomಗೆ ತೆರಳಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2018/8.19** | ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡಿರುವ 12 ಸರ್ಕಾರಿ ಮಹಿಳಾ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸಿ ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಿಂದ ಸಂಯೋಜನೆ ಪಡೆಯುವ ಬಗೆಗೆ. |
| **ತೀರ್ಮಾನ** | ಒಟ್ಟಾರೆ ವಿವಿಧ ಮಹಿಳಾ ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರ ಅಭಿಪ್ರಾಯವನ್ನು ಪರಿಶೀಲಿಸಿದ ಸಿಂಡಿಕೇಟ್ ಆಯಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉಂಟಾಗುವ ಆಗುಹೋಗುಗಳನ್ನು ಗಮನಿಸಿ ಮತ್ತು ಈ ಎಲ್ಲಾ ಕಾಲೇಜುಗಳು ಮೈಸೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಯಲ್ಲೇ ಬರುವುದರಿಂದ ಸದ್ಯ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.20** | ಸಂಯೋಜಿತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಎಂ.ಕಾಂ., ಸ್ನಾತಕೋತ್ತರ ಕೋರ್ಸಿಗೆ 2018-19ನೇ ಸಾಲಿನಿಂದ ಅನ್ವಯವಾಗುವಂತೆ ಹೆಚ್ಚುವರಿ ಪ್ರವೇಶಾತಿ ನೀಡುವ ಬಗೆಗೆ. |
| **ತೀರ್ಮಾನ** | ಪ್ರಸ್ತಾವನೆಯಲ್ಲಿರುವಂತೆ ಹಾಸನ ಜಿಲ್ಲೆಯ ನಾಲ್ಕು ಸರ್ಕಾರಿ ಕಾಲೇಜುಗಳಿಗೆ 2018-19ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಎಂ.ಕಾಂ. ಕೋರ್ಸ್‌ಗಳಿಗೆ ಹೆಚ್ಚುವರಿ ಸೀಟುಗಳ ಪ್ರವೇಶಾತಿಗೆ ಸ್ಥಳೀಯ ತನಿಖಾ ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/8.21** | ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದಿರುವ "National Ayurveda Dietetics Research Institute" ಎಂಬ ಹೆಸರನ್ನು "Regional Ayurveda Research Institute for Metabolic Disorders" ಎಂದು ಬದಲಾವಣೆ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದಿರುವ "National Ayurveda Dietetics Research Institute" ಎಂಬ ಹೆಸರನ್ನು The Director General, Central Council for Research in Ayurvedic Sciences, New Delhi ಅವರ ದಿನಾಂಕ 12-04-2016ರ ಅಧಿಸೂಚನೆಯಂತೆ "Regional Ayurveda Research Institute for Metabolic Disorders" ಎಂಬ ಬದಲಾವಣೆಯೊಂದಿಗೆ 2018-19ನೇ ಸಾಲಿನಿಂದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.22** | DOS in Sericulture, University of Mysore ಮತ್ತು Sphingidae-Museum, Czech Republic ನಡುವಣ ಸಂಶೋಧನಾ ವಿನಿಮಯ ಕಾರ್ಯಕ್ರಮದಡಿ ಮಾಡಿಕೊಳ್ಳಲಾದ ಒಡಂಬಡಿಕೆಯನ್ನು ಪುನಃ 05 ವರ್ಷಗಳ ಅವಧಿಗೆ ನವೀಕರಿಸಿರುವ ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | DOS in Sericulture, University of Mysore ಮತ್ತು Sphingidae-Museum, Czech Republic ನಡುವಣ ಸಂಶೋಧನಾ ವಿನಿಮಯ ಕಾರ್ಯಕ್ರಮದಡಿ ಮಾಡಿಕೊಳ್ಳಲಾದ ಒಡಂಬಡಿಕೆಯನ್ನು ಪುನಃ 05 ವರ್ಷಗಳ ಅವಧಿಗೆ ನವೀಕರಿಸಿರುವುದನ್ನು ಸಿಂಡಿಕೇಟ್ ಸ್ಥಿರೀಕರಿಸಿತು. |
| **2018/8.23** | 2018-19ನೇ ಶೈಕ್ಷಣಿಕ ಸಾಲಿಗೆ ಕಾಲೇಜಿನಲ್ಲಿ ಹಾಲಿ ಇರುವ ವಿದ್ಯಾರ್ಥಿ ಪ್ರಮಾಣಕ್ಕೆ ವಿದ್ಯಾರ್ಥಿಗಳ ಹಾಗೂ ಪೋಷಕರ ಒತ್ತಡದ ಮೇರೆಗೆ ಪ್ರಾಂಶುಪಾಲರುಗಳಿಂದ ಬಂದಿರುವ ಮನವಿಯಂತೆ ಹೆಚ್ಚುವರಿ ವಿದ್ಯಾರ್ಥಿ ಪ್ರಮಾಣವನ್ನು ತಾತ್ಕಾಲಿಕವಾಗಿ ನೀಡುವ ಬಗ್ಗೆ. |
| **ತೀರ್ಮಾನ** | 2018-19ನೇ ಶೈಕ್ಷಣಿಕ ಸಾಲಿಗೆ ಕಾಲೇಜಿನಲ್ಲಿ ಹಾಲಿ ಇರುವ ವಿದ್ಯಾರ್ಥಿ ಪ್ರಮಾಣಕ್ಕೆ ವಿದ್ಯಾರ್ಥಿಗಳ ಹಾಗೂ ಪೋಷಕರ ಒತ್ತಡದ ಮೇರೆಗೆ ಪ್ರಾಂಶುಪಾಲರುಗಳಿಂದ ಬಂದಿರುವ ಮನವಿಯಂತೆ ತಾತ್ಕಾಲಿಕವಾಗಿ ಹೆಚ್ಚುವರಿ ಪ್ರವೇಶಾತಿ ಮಾಡಿಕೊಳ್ಳಲು ಸಮಿತಿಯು ನೀಡಿರುವ ವರದಿಯನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| **2018/8.24** | ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಬಿ.ಜಿ.ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಈ ಪ್ರಥಮ ದರ್ಜೆ ಕಾಲೇಜನ್ನು 2018–19 ನೇ ಶೈಕ್ಷಣಿಕ ಸಾಲಿನಿಂದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸುಪರ್ಧಿಗೆ ಹಸ್ತಾಂತರ ಮಾಡುವುದರ ಬಗ್ಗೆ. |
| **ತೀರ್ಮಾನ** | ಸರ್ಕಾರದ ಆದೇಶದಂತೆ ಬಿ.ಜಿ.ಎಸ್. ಪ್ರಥಮ ದರ್ಜೆ ಕಾಲೇಜು, ಬಿ.ಜಿ.ನಗರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ, ಈ ಪ್ರಥಮ ದರ್ಜೆ ಕಾಲೇಜನ್ನು 2018–19 ನೇ ಶೈಕ್ಷಣಿಕ ಸಾಲಿನಿಂದ ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಸುಪರ್ಧಿಗೆ ಹಸ್ತಾಂತರಿಸಲು ಹಾಗೂ 2016–17 ಮತ್ತು 2017–18ನೇ ಸಾಲಿನಲ್ಲಿ ಈಗಾಗಲೇ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ನಿಯಮಾನುಸಾರ ವಿಶ್ವವಿದ್ಯಾನಿಲಯದಲ್ಲಿ ಪದವಿ ಶಿಕ್ಷಣವನ್ನು ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.25** | ಡಾ. ಎಂ.ಎಸ್.ವಿಜಯಕುಮಾರ್, ರಾಮಾನುಜನ್ ಫೆಲೋ ಆದ ಇವರಿಗೆ ರಸಾಯನಶಾಸ್ತ್ರ ವಿಷಯದಲ್ಲಿ ಮಾರ್ಗದರ್ಶಕರ ಮಾನ್ಯತೆಯನ್ನು ನೀಡುವ ಬಗ್ಗೆ. |
| **ತೀರ್ಮಾನ** | ರಾಮಾನುಜನ್ ಫೆಲೋ ಮತ್ತು ಇನ್ನಾವುದೇ ಪ್ರತಿಷ್ಠಿತ ಫೆಲೋ ಆಗಿ ಆಯ್ಕೆಯಾಗಿ ಬೋಧನಾ ಕಾರ್ಯದಲ್ಲಿ ತೊಡಗುವ ಬೋಧಕರಿಗೆ ಮಾರ್ಗದರ್ಶಕರ ಮಾನ್ಯತೆ ಪಡೆಯಲು ಅನುಕೂಲವಾಗುವಂತೆ ಪಿಹೆಚ್.ಡಿ., ನಿಯಮಾವಳಿ 2017ಕ್ಕೆ ಸೂಕ್ತ ತಿದ್ದುಪಡಿ ಮಾಡಲು ಸರ್ವಾನುಮತದಿಂದ ಸಿಂಡಿಕೇಟ್ ತೀರ್ಮಾನಿಸಿತು. |
| **2018/8.26** | ಪ್ರೊ. ರವೀಶ ಕೋಟೇಶ್ವರ್ ಆನಂದ್‌ರಾವ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ 80ರಷ್ಟು ಹಣವನ್ನು M.Sc., in Microbiology ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಲುವಾಗಿ **"ಪ್ರೊ. ರವೀಶ ಕೊಟೇಶ್ವರ್ ಆನಂದ್‌ರಾವ್ ಚಿನ್ನದ ಪದಕ ದತ್ತಿ ಸ್ಥಾಪನೆ"** ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.27** | ಪ್ರೊ. ರವೀಶ ಕೋಟೇಶ್ವರ್ ಆನಂದ್‌ರಾವ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ. 20ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ 80ರಷ್ಟು ಹಣವನ್ನು M.Sc., in Botany ಸ್ನಾತಕೋತ್ತರ ಪದವಿಯಲ್ಲಿ ಅತಿ ಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಚಿನ್ನದ ಪದಕ ನೀಡುವ ಸಲುವಾಗಿ **"ಪ್ರೊ. ರವೀಶ ಕೊಟೇಶ್ವರ್ ಆನಂದ್‌ರಾವ್ ಚಿನ್ನದ ಪದಕ ದತ್ತಿ ಸ್ಥಾಪನೆ"** ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.28** | 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ |
| **ತೀರ್ಮಾನ** | ಅನುಮೋದಿಸಲಾಯಿತು. |
| **2018/8.29** | ದಿನಾಂಕ 28–06–2018 ರಂದು ನಡೆದ 2018–19ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೇ ಸಭೆಯ ನಿರ್ಣಯಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಬಗ್ಗೆ (ಸಭಾ ನಡಾವಳಿಯನ್ನು ಲಗತ್ತಿಸಿದೆ). |
| **ತೀರ್ಮಾನ** | ದಿನಾಂಕ 28–06–2018 ರಂದು ನಡೆದ 2018–19ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಆಡಳಿತ, ನಿರ್ವಹಣೆ ಹಾಗೂ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಲಹಾ ಸಮಿತಿಯ ಮೊದಲನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/8.30** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು |
| **ತೀರ್ಮಾನ** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2018/8.31** | ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ವತಿಯಿಂದ ರೂಪಿಸಲಾದ 'ವಿದ್ಯಾರ್ಥಿನಿಲಯಗಳ ಕೈಪಿಡಿ'ಗೆ ಸಿಂಡಿಕೇಟ್ ಅನುಮೋದನೆಯನ್ನು ಪಡೆಯುವ ಬಗ್ಗೆ. |
| **ತೀರ್ಮಾನ** | ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ವತಿಯಿಂದ ರೂಪಿಸಲಾದ 'ವಿದ್ಯಾರ್ಥಿನಿಲಯಗಳ ಕೈಪಿಡಿ'ಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/8.32** | ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ವಾರ್ಷಿಕ ವರದಿಯ ಪರಿಶೀಲನೆ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು ಹಾಗೂ ಸದರಿ ವಾರ್ಷಿಕ ವರದಿಯ ಮುಖ್ಯಾಂಶಗಳನ್ನು ಶೈಕ್ಷಣಿಕ ಮಂಡಳಿಯ ಸಭೆಯಲ್ಲಿ ಮಂಡಿಸಲು ಸಿಂಡಿಕೇಟ್ ಹಾಗೂ ಶೈಕ್ಷಣಿಕ ಮಂಡಳಿಯ ಸದಸ್ಯರಾದ ಡಾ. ಪ್ರೀತಿ ಅವರ ಹೆಸರನ್ನು ಸೂಚಿಸಿತು. |
| **2018/8.33** | ಶ್ರೀ. ಕೆ.ಕೆ. ಮಂಜುನಾಥ, ದ್ವಿತೀಯ ದರ್ಜೆ ಗುಮಾಸ್ತರು, ಗೌತಮ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಅನುಮತಿ ಕೋರಿರುವ ಬಗೆಗೆ. |
| **ತೀರ್ಮಾನ** | ಶ್ರೀ. ಕೆ.ಕೆ. ಮಂಜುನಾಥ ಇವರಿಂದ ವಿಶ್ವವಿದ್ಯಾನಿಲಯಕ್ಕೆ ದಂಡನಾ ರೂಪದಲ್ಲಿ ಬರಬೇಕಾಗಿರುವ ಬಾಕಿ ಹಣ ರೂ. 25,936–00ಗಳನ್ನು ಪಿಂಚಣಿ ಸೌಲಭ್ಯದ ಹಣದಿಂದ ಮುರುಗಡೆ ಮಾಡಿಕೊಂಡು ನಿಯಮಾನುಸಾರ ದಿನಾಂಕ 31–08–2018ಕ್ಕೆ ಅನ್ವಯವಾಗುವಂತೆ ಶ್ರೀ ಕೆ.ಕೆ. ಮಂಜುನಾಥ, ದ್ವಿತೀಯ ದರ್ಜೆ ಗುಮಾಸ್ತರು, ಗೌತಮ ವಿದ್ಯಾರ್ಥಿನಿಲಯ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದ ಸೇವೆಯಿಂದ ಸ್ವಯಂ ನಿವೃತ್ತಿ ಹೊಂದಲು ಸಿಂಡಿಕೇಟ್ ಅನುಮತಿಸಿತು. |
| **2018/8.34** | ಡಾ. ನಾಮದೇವ ಮಾರುತಿ ಗೌಡ, ಸಹಾಯಕ ಪ್ರಾಧ್ಯಾಪಕರು, ಹಿಂದಿ ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಇವರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ವಿಭಾಗದ ಪ್ರಾಧ್ಯಾಪಕರಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಹಾಗೂ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸುವ ಬಗ್ಗೆ. |
| **ತೀರ್ಮಾನ** | ಡಾ. ನಾಮದೇವ ಮಾರುತಿ ಗೌಡ, ಸಹಾಯಕ ಪ್ರಾಧ್ಯಾಪಕರು, ಹಿಂದಿ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಹಿಂದಿ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು ಹಾಗೂ ಸದರಿಯವರು ಕೋರಿರುವಂತೆ ಕರ್ನಾಟಕ ನಾಗರಿಕ ಸೇವಾ ನಿಯಮ 20(3)(ಬಿ) ಅನ್ವಯ ಸೇವೆಯಿಂದ ಬಿಡುಗಡೆಗೊಂಡ ದಿನಾಂಕದಿಂದ ಎರಡು ವರ್ಷಗಳವರೆಗೆ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2018/8.35** | ಶ್ರೀ ಉಮೇಶ್, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಇವರ ವಿರುದ್ಧ ಇದ್ದಂತಹ ಕಿರುಕುಳದ ದೂರಿನ ಬಗ್ಗೆ, ಮಹಾರಾಜ ಕಾಲೇಜಿನ ಮಹಿಳಾ ದೌರ್ಜನ್ಯ ತಡೆ ಮತ್ತು ನಿವಾರಣಾ ಸಮಿತಿಯು ವರದಿ ನೀಡಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಉಮೇಶ್, ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಇವರ ವಿರುದ್ಧ ಇದ್ದಂತಹ ಕಿರುಕುಳದ ದೂರಿನ ಬಗ್ಗೆ, ಮಹಾರಾಜ ಕಾಲೇಜಿನ ಮಹಿಳಾ ದೌರ್ಜನ್ಯ ತಡೆ ಮತ್ತು ನಿವಾರಣಾ ಸಮಿತಿಯು ವರದಿಯನ್ನು ಸಿಂಡಿಕೇಟ್ ಗಮನಿಸಿತು. ಮುಂದುವರೆದು, ಸದರಿ ವಿಷಯವನ್ನು ವಿಶ್ವವಿದ್ಯಾನಿಲಯದ ಆಂತರೀಕ ದೂರು ಸಮಿತಿಗೆ ಮರುವಿಚಾರಣೆಗಾಗಿ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.36** | ಡಾ. ರೋಹಿತ ಈಶ್ವರ್, ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಇವರಿಗೆ ಸ್ವಂತ ಕೆಲಸ ನಿಮಿತ್ತ ಅಮೇರಿಕ ದೇಶಕ್ಕೆ ಹೋಗಿಬಂದಿರುವುದಕ್ಕೆ ಘಟನೋತ್ತರ ಅನುಮತಿ ನೀಡಿರುವ ವಿಷಯವನ್ನು ಅನುಸಮರ್ಥನೆಗಾಗಿ. |
| **ತೀರ್ಮಾನ** | ಡಾ. ರೋಹಿತ ಈಶ್ವರ್, ಸಹಾಯಕ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ |

| | |
|---|---|
| | ವಿಭಾಗ, ಮಹಾರಾಜ ಕಾಲೇಜು, ಮೈಸೂರು, ಇವರು ದಿನಾಂಕ 15–04–2018ರಿಂದ 18–05–2018ರವರೆಗೆ ಸೆಮಿಸ್ಟರ್ ರಜೆಯನ್ನು ಬಳಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ಸ್ವಂತ ಕೆಲಸ ನಿಮಿತ್ತ ಅಮೇರಿಕ ದೇಶಕ್ಕೆ ಹೋಗಿಬಂದಿರುವುದಕ್ಕೆ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/8.37** | ಡಾ. ಕೆ.ಬಿ.ಪ್ರವೀಣ್, ಇವರನ್ನು ವಿದ್ಯಾರ್ಥಿ ಕ್ಷೇಮ ಪಾಲನಾ ಕಛೇರಿಯ ಪೂರ್ಣಕಾಲಿಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ನಿಯೋಜಿಸುವ ಬಗ್ಗೆ. |
| **ತೀರ್ಮಾನ** | ಡಾ. ಕೆ.ಬಿ.ಪ್ರವೀಣ್ ಇವರನ್ನು ವಿದ್ಯಾರ್ಥಿ ಕ್ಷೇಮ ಪಾಲನಾ ಕಛೇರಿಯ ಪೂರ್ಣಕಾಲಿಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಲು ನಿಯೋಜಿಸುವಂತೆ ಕೋರಿರುವುದನ್ನು ಅವಗಾಹಿಸಿತು ಮತ್ತು ಸದ್ಯ ಯಥಾಸ್ಥಿತಿಯನ್ನು ಪಾಲಿಸುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| **2018/8.38** | ಡಾ. ವಿ.ವಾಸುದೇವ್, ನಿವೃತ್ತ ಪ್ರಾಧ್ಯಾಪಕರು, ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರ ಪಿಂಚಣಿ ಬಗ್ಗೆ. |
| **ತೀರ್ಮಾನ** | ಇತ್ತೀಚಿನ ಉಚ್ಚನ್ಯಾಯಾಲಯದ ತೀರ್ಪಿನನ್ವಯ 2006 ಮತ್ತು 2007ನೇ ವರ್ಷದ ನೇಮಕಾತಿಯ ಸಂಬಂಧ ಸರ್ಕಾರ ಕ್ರಮಕೈಗೊಳ್ಳಬೇಕಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಡಾ. ವಿ.ವಾಸುದೇವ್, ನಿವೃತ್ತ ಪ್ರಾಧ್ಯಾಪಕರು, ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರು 1982ರಿಂದ ಸಲ್ಲಿಸಿರುವ ಸುದೀರ್ಘ ಸೇವೆಯನ್ನು ಪರಿಗಣಿಸಿದ ಸಿಂಡಿಕೇಟ್ 29–05–1998ರಿಂದ 01–08–2007ರವರೆಗೆ ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಪ್ರವಾಚಕರಾಗಿ ಸಲ್ಲಿಸಿರುವ ಅವಧಿಗೆ ಬರಬೇಕಾಗಿರುವ ಪಿಂಚಣಿ ವಂತಿಕೆಯನ್ನು ಕುವೆಂಪು ವಿಶ್ವವಿದ್ಯಾನಿಲಯ ಅಥವಾ ಸದರಿ ಪ್ರಾಧ್ಯಾಪಕರಿಂದಲೇ ಪಾವತಿಸಿಕೊಂಡು ಅವಶ್ಯ ಷರತ್ತುಗಳೊಂದಿಗೆ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.39** | Proposed paper Setting work Expenditure for KSET 2018 Examination |
| **ತೀರ್ಮಾನ** | The Syndicate has approved to draw the amount, for the proposal pertaining to taken up of paper setting work for KSET 2018 Examination, on A.C. Bill as below:<br>**Item No. 1** – Everytime an A.C. bill for Rs. 10,00,000/- could be drawn and an NDC be submitted within 30 days for the total amount needed.<br>**Item No. 2** – Everytime an A.C. bill for Rs. 10,00,000/- could be drawn and an NDC be submitted within 30 days for the total amount needed.<br>**Item No. 3 & 4** – Payment can be honoured by the Finance Officer for the Guest house accommodation and Refreshment charges for the payable DC bill.<br>**Item No. 5** – Taxi can be hired from operators who are on contract with the university and Payment can be made on payable DC bill. |
| **2018/8.40** | ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಜಿ.ಟಿ.ರಾಮಚಂದ್ರಪ್ಪನವರ ನಂತರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವವರ ಪೈಕಿ ಹಿರಿಯರಾಗಿರುವ ಡಾ. ಕೃಷ್ಣ ಆರ್.ಹೊಂಬಾಳ್, ಸಹಾಯಕ ಪ್ರಾಧ್ಯಾಪಕರು ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/8.41** | ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರಂತೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ವೇಲಂಡೈನ್ ರಾಜೇಂದ್ರಕುಮಾರ್, ಸಹಾಯಕ ಪ್ರಾಧ್ಯಾಪಕರು ಇವರನ್ನು ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| 2018/8.42 | ಮೈಸೂರು ವಿಶ್ವವಿದ್ಯಾನಿಲಯದ NET/SLET ಕೇಂದ್ರದ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಬಿ. ಬಸವಲಿಂಗು ನಿವೃತ್ತ ಪ್ರಾಧ್ಯಾಪಕರು, ಇವರು ಸಂಯೋಜಕರ ಹುದ್ದೆಯಲ್ಲಿ ಪಡೆದ ಗೌರವಧನದ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ NET/SLET ಕೇಂದ್ರದ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದ ಡಾ. ಬಿ. ಬಸವಲಿಂಗು, ನಿವೃತ್ತ ಪ್ರಾಧ್ಯಾಪಕರು, ಇವರು ಅದೇ ಅವಧಿಯಲ್ಲಿ Emeritus Fellowship ಪಡೆಯುತ್ತಿದ್ದು ಅದರ ಮಾರ್ಗಸೂಚಿಯನ್ವಯ ಯಾವುದೇ ಲಾಭದಾಯಕ ಹುದ್ದೆ ಹೊಂದಿರಬಾರದೆಂಬ ನಿಯಮವಿರುವ ಕಾರಣಕ್ಕಾಗಿ ಸಂಯೋಜಕರ ಹುದ್ದೆಯಲ್ಲಿ ಪಡೆದ ಗೌರವಧನವನ್ನು ಹಿಂತಿರುಗಿಸಲು ಸೂಚಿಸಿರುವುದರ ಬಗ್ಗೆ ಸದರಿಯವರು ಮನವಿ ಸಲ್ಲಿಸಿರುವುದನ್ನು ಹಾಗೂ ಅದರಲ್ಲಿ ತಿಳಿಸಿರುವ ಅಂಶಗಳನ್ನು ಗಮನಿಸಿದ ಸಿಂಡಿಕೇಟ್ ಇದೊಂದು ವಿಶೇಷ ಸಂದರ್ಭವೆಂದು ಅವರಿಂದ ಗೌರವಧನವನ್ನು ಹಿಂಪಡೆಯಬೇಕೆಂಬ ನಿರ್ಧಾರವನ್ನು ಕೈಬಿಡಲು ತೀರ್ಮಾನಿಸಿತು. |
| 2018/8.43 | ಕುಕ್ಕರಹಳ್ಳಿ ಕೆರೆಯ ಮೀನು ಪಾಶುವಾರು ಗುತ್ತಿಗೆಯ ಹಕ್ಕನ್ನು ಮುಂದುವರೆಸುವ ಬಗ್ಗೆ. |
| ತೀರ್ಮಾನ | ಒಪ್ಪಂದದ ಅನುಸಾರ 2018–19ನೇ ಸಾಲಿಗೆ ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಹಿಡಿಯುವುದಕ್ಕೆ ಗುತ್ತಿಗೆಯನ್ನು ಮುಂದುವರೆಸಲು ಮಂಜೂರಾತಿ ನೀಡಿರುವುದನ್ನು ಅನುಸಮರ್ಥಿಸಿತು ಹಾಗೂ 2017–18ನೇ ವರ್ಷದ ಲೈಸೆನ್ಸ್ ಶುಲ್ಕವನ್ನು ಮನ್ನಾ ಮಾಡುವಂತೆ ಕೋರಿರುವ ವಿಷಯವನ್ನು ಪೂರ್ಣ ವಿವರಗಳೊಡನೆ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತೀರ್ಮಾನಿಸಿತು. |
| 2018/8.44 | ವಿಶ್ವವಿದ್ಯಾನಿಲಯ ಅತಿಥಿ ಉಪನ್ಯಾಪಕರ ಸಂಬಂಧ ದೂರುಗಳ ಹಾಗೂ ಆರೋಪಗಳ ಬಗ್ಗೆ. |
| ತೀರ್ಮಾನ | 2018–19ನೇ ಸಾಲಿಗೆ ವಿಶ್ವವಿದ್ಯಾನಿಲಯದ ಆಡಳಿತ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಉಪನ್ಯಾಸಕರಾಗಿ ಆಹ್ವಾನಿಸದಿರಲು ದಿನಾಂಕ 21–06–2018ರಂದು ನಡೆದ ಸಿಂಡಿಕೇಟ್ ಸಭೆಯು ನಿರ್ಧರಿಸಿರುವುದನ್ನು ಮರುಪರಿಶೀಲಿಸುವ ಸಲುವಾಗಿ ಕುಲಸಚಿವರಿಗೆ ಅಧಿಕಾರ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/8.45 | ಡಾ. ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು ಇವರ ಪರಿಸರ ಅಧ್ಯಯನದಲ್ಲಿನ ನಿಯೋಜನೆಯನ್ನು ಅವಧಿಯನ್ನು ವಿಸ್ತರಿಸುವ ಬಗ್ಗೆ. |
| ತೀರ್ಮಾನ | ದಿನಾಂಕ 15–12–2017ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿನ ತೀರ್ಮಾನದೊಂದಿಗೆ ಡಾ. ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮಾನಸಗಂಗೋತ್ರಿ, ಮೈಸೂರು ಇವರು ಪರಿಸರ ಅಧ್ಯಯನ ವಿಭಾಗದಲ್ಲಿನ ಅಧ್ಯಕ್ಷರ ಮೂಲಕ ಸಲ್ಲಿಸಿರುವ ಮನವಿಯನ್ನು ಮರುಪರಿಶೀಲಿಸಿದ ಸಿಂಡಿಕೇಟ್ ಸದರಿಯವರನ್ನು ಪರಿಸರ ಅಧ್ಯಯನ ವಿಭಾಗದಲ್ಲಿಯೇ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/8.46 | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ International School of Information Management ಕೇಂದ್ರದ ಕಾರ್ಯವೈಖರಿ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿದ್ದ International School of Information Management ಕೇಂದ್ರದ ಕಟ್ಟಡವನ್ನು ವಿಶ್ವವಿದ್ಯಾನಿಲಯದ ಸ್ವಾಧೀನಕ್ಕೆ ಪಡೆಯಲು ಹಾಗೂ ವಿಶ್ವವಿದ್ಯಾನಿಲಯದ ಸಂಪೂರ್ಣ ಅಸಲನ್ನು ಮನ್ನಾ ಮಾಡಲು ಬ್ಯಾಂಕ್‌ಗೆ ಪತ್ರ ವ್ಯವಹರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| 2018/8.47 | ಶ್ರೀ ಎಸ್.ಎ.ಉಮೇಶ್, ಸಹಾಯಕ ಅಭಿಯಂತರರು, ಇವರ ಹೊಸ ಪಿಂಚಣಿ ಹಾಗೂ ಸೇವಾ ಹಿರಿತನ ಪಟ್ಟಿಯಲ್ಲಿ ಕೊನೆಯವರಾಗಿ ಪರಿಗಣಿಸಿರುವುದನ್ನು ಕೈಬಿಡುವ ಬಗ್ಗೆ. |
| ತೀರ್ಮಾನ | ಶ್ರೀ ಎಸ್.ಎ.ಉಮೇಶ್, ಸಹಾಯಕ ಅಭಿಯಂತರರು, ಇವರ ಹೊಸ ಪಿಂಚಣಿ ಹಾಗೂ ಸೇವಾ ಹಿರಿತನ ಪಟ್ಟಿಯಲ್ಲಿ ಕೊನೆಯವರಾಗಿ ಪರಿಗಣಿಸಿರುವುದನ್ನು ಪ್ರಶ್ನಿಸಿ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿರುವುದನ್ನು ಹಿಂಪಡೆದ ನಂತರ ಅವರ ಮನವಿಯನ್ನು ಪರಿಗಣಿಸಲು ಮರುಮಂಡಿಸುವಂತೆ ಸಿಂಡಿಕೇಟ್ ತೀರ್ಮಾನಿಸಿತು. |

| 2018/8.48 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬೋಧಕೇತರ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಕುರಿತು. |
|---|---|
| ತೀರ್ಮಾನ | ಕುಲಸಚಿವರ ಅನುಪಸ್ಥಿತಿಯಲ್ಲಿ ದಿನಾಂಕ 09-08-2018ರಂದು ಸರ್ಕಾರದಿಂದ ಬಂದಿರುವ ಪತ್ರದ ಬಗ್ಗೆ ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 11(ಎಂ)ರಲ್ಲಿರುವ Such other officers of the University as the Chancellor may, on the recommendation of the State Government from time to time, designate ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದು ಆ ಬಗ್ಗೆ ಕೂಲಂಕಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 11(ಎಮ್)ರಡಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇನ್ನಾವುದೇ ಅಧಿಕಾರಿಗಳು ಇಲ್ಲದಿರುವುದರಿಂದ ಸರ್ಕಾರದ ಹಂತದಲ್ಲೇ 11(ಎಮ್)ರ ಅನ್ವಯ ಅಧಿಕಾರಿಯನ್ನು ನೇಮಿಸಲು ಕ್ರಮಕೈಗೊಳ್ಳಬೇಕಾಗಿ ಸರ್ಕಾರವನ್ನು ಕೋರುವಂತೆ ಸಿಂಡಿಕೇಟ್ ತೀರ್ಮಾನಿಸಿತು. |

**ಇತರೆ ವಿಷಯಗಳು**

1) ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಸಿ' ಮತ್ತು 'ಡಿ' ಗುಂಪಿನ ತಾತ್ಕಾಲಿಕ ನೌಕರರುಗಳ ವೇತನವನ್ನು ಹಲವಾರು ವರ್ಷಗಳಿಂದ ಪರಿಷ್ಕರಿಸದೇ ಇರುವುದರಿಂದ ವೇತನವನ್ನು ಪರಿಷ್ಕರಿಸಿಕೊಡುವಂತೆ ಮನವಿಯನ್ನು ಸಲ್ಲಿಸಿರುತ್ತಾರೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು.

   ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಹಣಕಾಸು ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ ವರದಿ ಪಡೆಯಲು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

2) ಸೈಂಟ್ ಆಗ್ನೇಸ್ ಪದವಿ ಪೂರ್ವ ಕಾಲೇಜಿನಲ್ಲಿ ಗ್ರಂಥಪಾಲಕರಾಗಿ ಸೇವೆಸಲ್ಲಿಸುತ್ತಿರುವ ಶ್ರೀ ಜವರಶೆಟ್ಟಿ ಇವರ ಅಂಕಪಟ್ಟಿಗಳ ನೈಜತೆಯನ್ನು ದೃಢೀಕರಿಸುವ ಸಂದರ್ಭದಲ್ಲಿ ಅಂಕಗಳು ತಿದ್ದುಪಡಿಯಾಗಿರುವ ಬಗ್ಗೆ ಪರಿಶೀಲಿಸಲು ಒಂದು ವಿಚಾರಣೆಯನ್ನು ನಡೆಸುವಂತೆ ಪ್ರೊ. ಜೆ.ಸೋಮಶೇಖರ, ಕುಲಸಚಿವ(ಪರೀಕ್ಷಾಂಗ) ಅವರು ಕೋರಿದರು.

   ಈ ವಿಷಯದ ಸಂಬಂಧವಾಗಿ ವಿಚಾರಣೆ ಮಾಡಿ ವರದಿ ನೀಡಲು ವಿಚಾರಣಾಧಿಕಾರಿಯನ್ನು ಮತ್ತು ಮಂಡನಾಧಿಕಾರಿಗಳನ್ನು ನೇಮಿಸಲು ಸಿಂಡಿಕೇಟ್ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕೊನೆಯಲ್ಲಿ ನಾಲ್ಕನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಲಹೆ ಸಹಕಾರಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

ಸಹಿ/-
**ಕುಲಪತಿ ಮತ್ತು ಅಧ್ಯಕ್ಷರು**